prepp

Practice, Learn and Achieve Your Goal with Prepp

# UGC NET Exam

## Kannada

Simplifying
Government Exams

SSC CHSL | IAS EXAM | RRB NTPC | NTSE | CDS
SSC CGL | CBSE UGC NET | IBPS PO | NDA
SBI PO | IBPS CLERK | AFCAT | SSC JE | CTET
CSIR UGC NET | CAPF | IBPS RRB

www.prepp.in

**Signature and Name of Invigilator**

1. (Signature) ______________________

   (Name) ______________________

2. (Signature) ______________________

   (Name) ______________________

OMR Sheet No. : ......................................

(To be filled by the Candidate)

Roll No. | | | | | | | |

(In figures as per admission card)

Roll No.______________________________

(In words)

**J 2 1 1 0**

**Test Booklet No.**

Time : **1** $^{1}/_{4}$ hours]

# PAPER-II
# KANNADA

[Maximum Marks : **100**

| Number of Pages in this Booklet : **12** | Number of Questions in this Booklet : **50** |
|---|---|

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered in the OMR Sheet and the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **Answer Sheet given inside the Paper I Booklet only.** If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the test booklet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet and OMR Answer sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद प्रश्न-पुस्तिका की क्रम संख्या OMR पत्रक पर अंकित करें और OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है ।
   **उदाहरण :** (A) (B) ● (D)
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये उत्तर-पत्रक पर ही** अंकित करने हैं । यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप उत्तर-पुस्तिका पर अपना नाम या ऐसा कोई भी निशान जिससे आपकी पहचान हो सके, किसी भी भाग पर दर्शाते या अंकित करते हैं तो परीक्षा के लिये अयोग्य घोषित कर दिये जायेंगे ।
9. आपको परीक्षा समाप्त होने पर प्रश्न-पुस्तिका एवं OMR उत्तर-पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें ।
10. **केवल नीले/काले बाल प्वाईंट पैन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई अंक काटे नहीं जाएँगे ।**



Latest Sarkari Jobs, Govt Exam Results, Vacancies and updates on one click
Know More

**KANNADA**
**Paper-II**

**Note :** This paper contains **fifty (50)** objective type questions, each question carrying **two (2)** marks. Attempt all the questions.

**ಸೂಚನೆ :** ಈ ಪತ್ರಿಕೆಯಲ್ಲಿ ಬಹುಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿ.

**1.** ಬಾದಾಮಿ ಶಾಸನದ ಛಂದಸ್ಸು :
(A) ಸಾಂಗತ್ಯ (B) ಷಟ್ಪದಿ
(C) ತ್ರಿಪದಿ (D) ಅಕ್ಕರ

**2.** ಇದು ಒಂದು ಚಂಪೂ ಕೃತಿ :
(A) ಚಾವುಂಡರಾಯ ಪುರಾಣ
(B) ಪಂಚತಂತ್ರ
(C) ಯಶೋಧರ ಚರಿತೆ
(D) ಸೋಮನಾಥ ಚಾರಿತ್ರ್ಯ

**3.** ವೈದಿಕಧರ್ಮದ ಪ್ರೇರಣೆಯಿಂದ ಬಂದ ಕೃತಿ :
(A) ಜಗನ್ನಾಥ ವಿಜಯ
(B) ಧರ್ಮಾಮೃತ
(C) ಆದಿಪುರಾಣ
(D) ಪ್ರಭುಲಿಂಗಲೀಲೆ

**4.** ರಾಷ್ಟ್ರಕೂಟ ಮೂರನೆಯ ಕೃಷ್ಣನು ಆಶ್ರಯ ನೀಡಿದಕವಿ :
(A) ಜನ್ನ (B) ರನ್ನ
(C) ಆಂಡಯ್ಯ (D) ಪೊನ್ನ

**5.** ಪ್ರಾಕೃತ ಸಾಹಿತ್ಯದಿಂದ ಪ್ರೇರಣೆ ಪಡೆದ ಕೃತಿ :
(A) ರಾಮಚಂದ್ರ ಚರಿತ ಪುರಾಣ
(B) ಬಸವ ಪುರಾಣ
(C) ಸೊಬಗಿನ ಸೋನೆ
(D) ಹದಿಬದೆಯ ಧರ್ಮ

**6.** "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್...." ಎನ್ನುವ ಹೇಳಿಕೆ ಕಂಡು ಬರುವಕೃತಿ :
(A) ವಡ್ಡಾರಾಧನೆ
(B) ಕಬ್ಬಿಗರ ಕಾವ
(C) ಕವಿರಾಜಮಾರ್ಗ
(D) ಶಿವತತ್ವ ಚಿಂತಾಮಣಿ

**7.** ಪಂಪಾಶತಕವನ್ನು ಬರೆದಕವಿ :
(A) ಅಲ್ಲಮ
(B) ಹರಿಹರ
(C) ನರಹರಿ
(D) ಪಂಪ

**8.** ದೇವಚಂದ್ರನು ರಚಿಸಿದ ಕೃತಿ :
(A) ರಾಜಾವಳೀ ಕಥೆ
(B) ರಾಮನಾಥ ಚರಿತೆ
(C) ಮೋಹನ ತರಂಗಿಣಿ
(D) ಜೈಮಿನಿ ಭಾರತ

**9.** ಕನ್ನಡ ಸಾಹಿತ್ಯ ಚರಿತ್ರೆಯನ್ನು ಮೊಟ್ಟಮೊದಲು ಬರೆದವರು :
(A) ಹರ್ಮನ್ ಮೊಗ್ಲಿಂಗ್
(B) ಫರ್ಡಿನಾಂಡ್ ಕಿಟೆಲ್
(C) ರಂ. ಶ್ರೀ. ಮುಗಳಿ
(D) ಇ.ಪಿ. ರೈಸ್



Latest Sarkari Jobs, Govt Exam Results, Vacancies and updates on one click
Know More

10. ಆಧುನಿಕ ಕನ್ನಡ ಕಾದಂಬರಿ ಪ್ರಕಾರವನ್ನು ಪ್ರಭಾವಿಸಿದ ಮಹತ್ವದ ಲೇಖಕ :
(A) ಸುಬ್ರಹ್ಮಣ್ಯ ಭಾರತಿ
(B) ಪ್ರೇಮಚಂದ್
(C) ಬಂಕಿಮಚಂದ್ರ
(D) ತಗಳಿ ಶಿವಶಂಕರ ಪಿಳ್ಳೈ

11. "ಸಾಹಿತ್ಯ ಮತ್ತು ಯುಗಧರ್ಮ" ಕೃತಿಯನ್ನು ರಚಿಸಿದವರು :
(A) ಗೋಪಾಲಕೃಷ್ಣ ಅಡಿಗ
(B) ಕೀರ್ತಿನಾಥ ಕುರ್ತಕೋಟಿ
(C) ಡಿ.ಆರ್. ನಾಗರಾಜ
(D) ಜಿ. ಎಚ್. ನಾಯಕ

12. ಇದು ಕುವೆಂಪು ಅವರ ಕೃತಿ :
(A) ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ
(B) ಗಂಗಾವತರಣ
(C) ಅಹಲ್ಯೆ
(D) ಗಿಳಿವಿಂಡು

13. 'ಧ್ವನಿತತ್ವ' ವನ್ನು ಪ್ರತಿಪಾದಿಸಿದ ಮೀಮಾಂಸಕಾರ :
(A) ವಾಮನ (B) ದಂಡಿ
(C) ಭಾಮಹ (D) ಆನಂದವರ್ಧನ

14. 'ವ್ಯಕ್ತಿ ನಿರಸನ ಸಿದ್ಧಾಂತ'ದ ಪ್ರತಿಪಾದಕ :
(A) ಹೊರೇಸ್
(B) ಐ.ಎ. ರಿಚರ್ಡ್ಸ್
(C) ಟಿ. ಎಸ್. ಎಲಿಯಟ್
(D) ಎಫ್. ಆರ್. ಲೀವೀಸ್

15. ಮಾರ್ಕ್ಸ್‌ವಾದೀ ವಿಮರ್ಶಕ :
(A) ಡೆರಿಡಾ
(B) ಜಾರ್ಜ್ ಲುಕಾಚ್ಸ್
(C) ಮ್ಯಾಥ್ಯೂ ಅರ್ನಾಲ್ಡ್
(D) ಎಡ್ವರ್ಡ್ ಸೈದ್

16. ಮನೋವಿಶ್ಲೇಷಣಾತ್ಮಕ ವಿಮರ್ಶಾ ವಿಧಾನದ ಪ್ರತಿಪಾದಕ :
(A) ಜೆ.ಜೆ. ಯೂಂಗ್
(B) ಎಜ್ರಾ ಪೌಂಡ್
(C) ರೊಲಾಂಡ್ ಬಾರ್ಥ್ಸ್
(D) ಮಿಷೆಲ್ ಫುಕೊ

17. 'ವಂದಾನ್' - ಈ ಪದವು ಕನ್ನಡ ಭಾಷೆಯ ಯಾವ ಅವಸ್ಥೆಗೆ ಸೇರುತ್ತದೆ ?
(A) ನಡುಗನ್ನಡ
(B) ಹಳಗನ್ನಡ
(C) ಹೊಸಗನ್ನಡ
(D) ಪೂರ್ವದ ಹಳಗನ್ನಡ

18. ಇವುಗಳಲ್ಲಿ ಅರಿಸಮಾಸ ಯಾವುದು ?
(A) ಅಂಗೈ (B) ಮುಕ್ಕಣ್ಣ
(C) ಮಖತಾವರೆ (D) ನಿಟ್ಟುಸಿರು

19. 'ಸಿಪಾಯಿ' ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದ ಎರವಲು ಪದ ?
(A) ಸಂಸ್ಕೃತ (B) ಫಾರಸಿ
(C) ಲ್ಯಾಟಿನ್ (D) ಪ್ರಾಕೃತ

20. ಇದು ಅರ್ಥ ವಿಸ್ತಾರಕ್ಕೆ ಒಂದು ಉದಾಹರಣೆ :
(A) ಎಣ್ಣೆ (B) ಮಂಗಳಾರತಿ
(C) ನಾತ (D) ಹೊನ್ನು



Latest Sarkari Jobs, Govt Exam Results, Vacancies and updates on one click
Know More

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

**21.** ಇವು ಗದ್ಯ ಗ್ರಂಥಗಳು :

(i) ಚಾವುಂಡರಾಯ ಪುರಾಣ ಮತ್ತು ರಾಮಾಶ್ವಮೇಧ

(ii) ಲೀಲಾವತಿ ಮತ್ತು ಯಶೋಧರ ಚರಿತೆ

(iii) ಅದ್ಭುತ ರಾಮಾಯಣ ಮತ್ತು ವಡ್ಡಾರಾಧನೆ

(iv) ವೀರೇಶ ಚರಿತೆ ಮತ್ತು ಸಮಯಪರೀಕ್ಷೆ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)

(B) (ii) ಮತ್ತು (iv)

(C) (iii) ಮತ್ತು (iv)

(D) (i) ಮತ್ತು (iii)

**22.** ಇವರು 13ನೆಯ ಶತಮಾನದ ಕನ್ನಡ ಕವಿಗಳು :

(i) ನಾಗಚಂದ್ರ ಮತ್ತು ದುರ್ಗಸಿಂಹ

(ii) ಜನ್ನ ಮತ್ತು ಆಂಡಯ್ಯ

(iii) ಚಾವುಂಡರಾಯ ಮತ್ತು Iನೆಯ ನಾಗವರ್ಮ

(iv) ರಾಘವಾಂಕ ಮತ್ತು ನೇಮಿಚಂದ್ರ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)

(B) (ii) ಮತ್ತು (iv)

(C) (i) ಮತ್ತು (iii)

(D) (iii) ಮತ್ತು (iv)

**23.** ಇವರು ವ್ಯಾಕರಣ ಗ್ರಂಥಗಳನ್ನು ರಚಿಸಿದವರು :

(i) ಕೇಶಿರಾಜ

(ii) ತಿರುಮಲಾರ್ಯ

(iii) II ನೆಯ ನಾಗವರ್ಮ

(iv) ಲಕ್ಕಣ ದಂಡೇಶ

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iv)

(B) (iii) ಮತ್ತು (iv)

(C) (i) ಮತ್ತು (iii)

(D) (i) ಮತ್ತು (iv)

**24.** ಇವು ಭಾರತೀಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು :

(i) ಅಲಂಕಾರ ಮತ್ತು ರೀತಿ

(ii) ಮಾನಸಿಕ ದೂರ

(iii) ವಕ್ರೋಕ್ತಿ ಮತ್ತು ಅನುಕರಣವಾದ

(iv) ಔಚಿತ್ಯ ಮತ್ತು ರಸ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv)

(B) (ii) ಮತ್ತು (iv)

(C) (ii) ಮತ್ತು (iii)

(D) (i) ಮತ್ತು (iii)



Latest Sarkari Jobs, Govt Exam Results, Vacancies and updates on one click
Know More

**25.** ಇವು ಅನ್ಯದೇಶೀಯ ಪದಗಳು :

(i) ತುಪಾಕಿ ಮತ್ತು ದಂಗೆ

(ii) ನೆಲ ಮತ್ತು ಜಲ

(iii) ಗುಲಾಮ ಮತ್ತು ಅನಾನಸು

(iv) ಕೂಸು ಮತ್ತು ಹೊನ್ನು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)

(B) (iii) ಮತ್ತು (iv)

(C) (ii) ಮತ್ತು (iv)

(D) (i) ಮತ್ತು (iii)

**26.** ಇವು ಜ್ಞಾನಪೀಠ ಪ್ರಶಸ್ತಿ ಪಡೆದ ಕೃತಿಗಳು :

(i) ಮಾಕಜ್ಜಿಯ ಕನಸುಗಳು ಮತ್ತು ನಾದಲೀಲೆ

(ii) ಯಯಾತಿ ಮತ್ತು ಶಿಕಾರಿ

(iii) ನಾಕುತಂತಿ ಮತ್ತು ಭಾರತ ಸಿಂಧು ರಶ್ಮಿ

(iv) ಶ್ರೀರಾಮಾಯಣ ದರ್ಶನಂ ಮತ್ತು ಚಿಕವೀರ ರಾಜೇಂದ್ರ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)

(B) (ii) ಮತ್ತು (iii)

(C) (iii) ಮತ್ತು (iv)

(D) (i) ಮತ್ತು (iv)

**27.** ಇವು ಅನುವಾದಿತ ಕಾದಂಬರಿಗಳು :

(i) ಯಯಾತಿ ಮತ್ತು ಕೆಂಪು ಮೀನು

(ii) ಆನಂದಮಠ ಮತ್ತು ಸಂಧ್ಯಾರಾಗ

(iii) ಶ್ರೀಕಾಂತ ಮತ್ತು ದಾಟು

(iv) ತಾಯಿ ಮತ್ತು ಹಮ್ಮು - ಬಿಮ್ಮು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv)

(B) (ii) ಮತ್ತು (iii)

(C) (ii) ಮತ್ತು (iv)

(D) (i) ಮತ್ತು (iii)

**28.** ಇವು ಕಂಠ್ಯವರ್ಣಗಳು :

(i) ಚ ಮತ್ತು ಜ

(ii) ಕ ಮತ್ತು ಙ

(iii) ಗ ಮತ್ತು ಘ

(iv) ತ ಮತ್ತು ಣ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv)

(B) (i) ಮತ್ತು (ii)

(C) (ii) ಮತ್ತು (iv)

(D) (ii) ಮತ್ತು (iii)

**29.** ಇವು ಕನ್ನಡದ ವಿಮರ್ಶಾಕೃತಿಗಳು :

(i) ಭುವನದ ಭಾಗ್ಯ

(ii) ರಸೋವೈಸ:

(iii) ಸಂಪ್ರತಿ

(iv) ನನ್ನ ರಸಯಾತ್ರೆ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv)

(B) (i) ಮತ್ತು (ii)

(C) (iii) ಮತ್ತು (iv)

(D) (ii) ಮತ್ತು (iii)

Prepp



Latest Sarkari Jobs, Govt Exam Results, Vacancies and updates on one click
Know More

30. ಇವು ಮಧುರ ಚೆನ್ನರಕೃತಿಗಳು :

(i) ಬೆಳಗು

(ii) ಒಲವೆ ನಮ್ಮ ಬದುಕು

(iii) ಜೇನಾಗುವಾ

(iv) ಕಾಳರಾತ್ರಿ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv)

(B) (ii) ಮತ್ತು (iii)

(C) (i) ಮತ್ತು (iii)

(D) (ii) ಮತ್ತು (iv)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ**

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

ಸಾಹಿತ್ಯವೆಂಬುದು ಎಂಥಾದ್ದು ? ಅದರ ಸ್ವಭಾವವೇನು ? – ಎಂದು ಬಹು ಕಾಲದಿಂದ ಚರ್ಚೆ ನಡೆಯುತ್ತಿದೆ. ನಮ್ಮ ದೇಶದಲ್ಲಿ ಸಂಸ್ಕೃತಲಾಕ್ಷಣಿಕರು ಆ ವಿಚಾರವಾಗಿ ಗ್ರಂಥಗಳನ್ನು ಬರೆದಿದ್ದಾರೆ ; ಪಾಶ್ಚಾತ್ಯರಲ್ಲಿಯೂ ಪಂಡಿತರೂ ಕವಿಗಳೂ ಪ್ರಬಂಧಗಳನ್ನು ಬರೆದಿದ್ದಾರೆ. ಈ ನಮ್ಮ ಮತ್ತು ಹೊರಗಿನ ಕಾವ್ಯಮೀಮಾಂಸಕರಲ್ಲಿ ಸ್ಥೂಲವಾಗಿ ಎರಡು ಪಕ್ಷಗಳಿವೆ. ಒಂದು ಪಕ್ಷದ ವರು – ಮನಸ್ಸಿಗೆ ತಾತ್ಕಾಲಿಕವಾಗಿಯಾದರೂ ಸಂತೋಷಕೊಡತಕ್ಕುದೇ ಕಾವ್ಯ ; ಯೋಚನೆ ಚಿಂತೆಗಳನ್ನು ಬಿಡಿಸಿ ಹರ್ಷವನ್ನುಂಟುಮಾಡುವುದೇ ಅದರ ಕರ್ತವ್ಯ ಎಂದು ಹೇಳುವರು. ಇನ್ನೊಂದು ಪಕ್ಷದವರು – ಕಾವ್ಯವು ಕೇವಲ ವಿನೋದಮಾತ್ರ ಪರ್ಯಾವಸಾಯಿಯಲ್ಲ ; ವಿನೋದಕ್ಕಿಂತ ಹೆಚ್ಚಾದ ಉದ್ದೇಶವೂ ಅದಕ್ಕುಂಟು, ಅದು ಮನಃಪರಿಪಾಕ ಎಂದು ಹೇಳುತ್ತಾರೆ. ಹೀಗೆ ಎರಡು ಮತಗಳು ಸ್ವದೇಶ ಪರದೇಶಗಳೆರಡರಲ್ಲಿಯೂ ಇರುತ್ತವೆ. ಕಾವ್ಯವನ್ನೋದಿದರೆ ಸಂತೋಷವೇನೋ ಉಂಟಾಗಲೇಬೇಕು. ಅದಿಲ್ಲದಿದ್ದರೆ ಆ ಗ್ರಂಥವನ್ನು ಜನರು ಮುಟ್ಟುವುದೇ ಇಲ್ಲ. ಆದರೆ ಅದರಿಂದ ಮನಸ್ಸಿನ ಮೇಲೆ ಒಂದು ವಿಶೇಷ ಪರಿಣಾಮವೂ ಆಗಬೇಕು ; ಹಾಗೆ ಆದ ಸಂಸ್ಕಾರದ ಮೂಲಕ ವಾಚಕನಿಗೆ ಆತ್ಮಶೋಧನೆಯುಂಟಾಗಿ, ಅವನ ಜೀವನರೀತಿಯು ಉತ್ತಮಪಡಬೇಕು. ಕಾವ್ಯದಿಂದ ವಾಚಕನ ಜೀವಿತದಲ್ಲಿ ವಿನೋದಕಾಲಕ್ಷೇಪ ಮಾತ್ರವಲ್ಲದೆ ಬೇರೊಂದು ಉದ್ಧಾರಕಾರ್ಯವೂ ನಡೆಯಬೇಕು. ಉತ್ಕೃಷ್ಟಭಾವನಾವಿಕಾಸವೇ ಆ ಕಾರ್ಯ. ಕಾವ್ಯರಸಾನುಭವದಿಂದ ಹೃದಯದಲ್ಲು-ತ್ಪನ್ನವಾಗುವ ಕರುಣವೀರಪ್ರೇಮಾದಿ ಯಾವ ಉದಾತ್ತಭಾವ ಗಳುಂಟೋ, ಅವೇ ಮನುಷ್ಯಜೀವನದ ಮೂಲಸಾಮಗ್ರಿ. ಅವೆ ನಮ್ಮ ಬಾಳಿಕೆಯ ಸಾರಾಂಶ. ಆದುದರಿಂದ ಕಾವ್ಯದ ಪ್ರತಿಫಲವೇ ನಮ್ಮ ಜೀವಿತದ ಸ್ವಾರಸ್ಯಭಾಗವೆಂದು ಹೇಳಬಹುದು. ನಾನು ಈ ಮತಕ್ಕೆ ಸೇರಿದವನು.

ಈ ಸಾಹಿತ್ಯವಿಚಾರ ಬಂದಾಗಲೆಲ್ಲಾ ನಾನು ಬೇಸರವಿಲ್ಲದೆ ಹೇಳುವ ಕಥೆಯೊಂದುಂಟು. ಹೆಯಿನ್ (Heine) ಎಂಬ ಒಬ್ಬ ಪ್ರಸಿದ್ಧ ಜರ್ಮನ್ ಕವಿಯಿದ್ದನಲ್ಲವೇ ? ಆತನಿಗೆ ಅವಸಾನಕಾಲ ಬಂದಾಗ ಆತನು ಇಷ್ಟಮಿತ್ರರನ್ನು ಕರೆದು – "ನೀವು ತುಂಬಾ ಅಭಿಮಾನಶಾಲಿಗಳು ; ನನ್ನ ಮರಣಾನಂತರ



Latest Sarkari Jobs, Govt Exam Results, Vacancies and updates on one click
Know More

ನನಗೆ ಒಂದು ಸಮಾಧಿ ಕಟ್ಟಿಸಿ, ಅದರ ಮೇಲೆ ಹೂವಿನಮಾಲೆಯನ್ನೇನೋ ಹಾಕು ವಿರಿ. ಆದರೆ ಅದರ ಜೊತೆಗೆ ನೀವು ಒಂದು ಕತ್ತಿಯನ್ನೂ ಇರಿಸಬೇಕು; ಇದು ನನ್ನ ಆಶೆ" – ಎಂದು ಕೇಳಿಕೊಂಡನಂತೆ. ಇದರ ತಾತ್ಪರ್ಯವೇನು ? ತಾನು ಬರೆದ ಕಾವ್ಯವು ಕೇವಲ ವಿನೋದಪ್ರಧಾನವಾದುದಲ್ಲ; ತನ್ನ ಜನರು ಲೋಕ ದಲ್ಲಿ ಶ್ರೇಯಸ್ಕರವಾದ ರೀತಿಯಲ್ಲಿ ಬಾಳಬೇಕಾದರೆ ಅವರ ಮನೋವೃತ್ತಿ ಜೀವನಕ್ರಮಗಳು ಉತ್ತಮವಾಗಬೇಕು ; ಹೀಗೆ ಅವರಿಗೆ ಆಗಬೇಕಾಗಿರುವ ಸಂಸ್ಕಾರಕ್ಕೆ ಸತ್ಕಾವ್ಯವೇ ಸಾಧನ ; ಕಾವ್ಯವು ದೇಶದಲ್ಲಿರತಕ್ಕ ಪಾಪ, ದೋಷ, ಅಜ್ಞಾನ, ದು:ಖ-ಇವುಗಳ ನಾಶಕ್ಕೆ ಸಹಾಯವಾಗ-ತಕ್ಕ ಕತ್ತಿ ; ಅದು ಬರಿಯ ಹೂಮಾಲೆಯಲ್ಲ. ಅದು ಹೆಂಗಸಿನಂತೆ ವಿಲಾಸೈಕಪರವಾದುದಲ್ಲ ; ಗಂಡಸಿನ ವೀರಚರ್ಯೆಯೂ ಅದಕ್ಕೆ ಸೇರಿದೆ ; - ಹೀಗೆಂಬುದೇ ಹೆಯಿನ್ ಕವಿಯ ಮನೋಗತ.

ಇದೇ ಅರ್ಥವನ್ನು ಕೊಡುವ ಇತರ ಮಹಾಪುರುಷರ ಕಥೆಗಳೂ ಇವೆ. ಆಲೆಗ್ಸಾಂಡರ್ ಮಹಾವೀರನು ದಿಗ್ವಿಜಯಾರ್ಥವಾಗಿ ಸಂಚಾರ ಮಾಡುತ್ತಿ ದ್ದಾಗ ಯಾವಾಗಲೂ ತನ್ನ ಹಾಸಿಗೆಯ ತಲೆದಿಂಬಿನ ಕೆಳಗೆ ರತ್ನ ಖಚಿತವಾದ ಪೆಟ್ಟಿಗೆಯಲ್ಲಿ ಹೋಮರ್ ಕವಿಯ 'ಇಲಿಯಡ್' ಮಹಾಕಾವ್ಯವನ್ನೂ ಒಂದು ಕತ್ತಿಯನ್ನೂ ಇಟ್ಟುಕೊಂಡಿರುತ್ತಿದ್ದನಂತೆ. ಆತನು ರಣರಂಗದಲ್ಲಿ ಪರಿಶ್ರಮಿಸಿ ರಾತ್ರಿ ಎಷ್ಟು ಹೊತ್ತಿಗೆ ಬಿಡಾರಕ್ಕೆ ಬಂದರೂ, ವಿಶ್ರಾಂತಿಗೆ ಮೈಯೊಡ್ಡುವುದಕ್ಕೆ ಮೊದಲು 'ಇಲಿಯಡ್' ಗ್ರಂಥವನ್ನೂ ತನ್ನ ಪಟ್ಟದ ಕತ್ತಿಯನ್ನೂ ಕಣ್ಣಾರ ನೋಡಿ ಸಂತೋಷಿಸಿ, ಅವುಗಳನ್ನು ತಲೆಕೆಳ-ಗಿಟ್ಟು ಕೊಂಡು ಆ ಬಳಿಕ ನಿದ್ದೆಹೋಗುತ್ತಿದ್ದನಂತೆ.

ಎಂದರೆ, ಕಾವ್ಯಪಾಠವು ದೊಂಬರ ಆಟದಂತಲ್ಲ ; ಇಸ್ಪೀಟು ಚಮತ್ಕಾರ ದಂತಲ್ಲ. ಅದು ಉತ್ತಮವಾದ ಜೀವನಮಾರ್ಗದ ದೀವಿಗೆ ; ಅಷ್ಟೇ ಅಲ್ಲ, ಅದೇ ನಮ್ಮ ಉತ್ತಮಜೀವನದ ಒಂದು ಭಾಗ, ಅಥವಾ ನಮ್ಮ ಜೀವನದ, ಒಂದು ಅತ್ಯುತ್ತಮಭಾಗ. ಈ ಸಿದ್ಧಾಂತವೇ ಸಾಧುವಾದುದೆಂದು ನಾನು ನಂಬಿದ್ದೇನೆ. ಅದಕ್ಕೆ ತಕ್ಕಂಥ ಗ್ರಂಥಗಳು ನಮ್ಮ ಭಾಷೆಯಲ್ಲಿ ಇನ್ನೂ ಹುಟ್ಟಬೇಕು.

ಕಾವ್ಯಗಳು - ಗದ್ಯವಾಗಲಿ, ಪದ್ಯ ವಾಗಲಿ - ಇವುಗಳಿಗಿಂತ ಗಹನವಾದ, ಆಳವಾದ, ವಿಸ್ತಾರವಾದ, ಬಹಳಕಾಲ ಉಳಿದಿರುವ ಧರ್ಮಸಂಕಟ ; ಆಧ್ಯಾತ್ಮಿಕ ಸಂದೇಹ, ಸಾಮಾಜಿಕ ವ್ಯಥೆ, ಬಹುಜನಮನೋರಥ - ಇವುಗಳನ್ನೆಲ್ಲಾ ಬಣ್ಣಿಸುತ್ತವೆ. ಇವು ನಮ್ಮ ದೇಶದ ಬಹು ಹಿಂದಿನ ಗ್ರಂಥಗಳಲ್ಲಿ ವ್ಯಕ್ತವಾಗುತ್ತವೆ. ರಾಮಾಯಣ, ಭಾರತ ಇವುಗಳಿಗಿಂತ ಹಿಂದಿನ ವೇದ, - ವೇದವು ಕೂಡ ಒಂದು ದೃಷ್ಟಿಯಿಂದ ಕಾವ್ಯವೆಂದೇ ನನ್ನ ಅಭಿಪ್ರಾಯ, - ಇವುಗಳಿಂದ ಆಗಿನ ಜನರ ಜೀವನರೀತಿ ಹೇಗಿತ್ತು, ಮನೋಭಾವಗಳು ಹೇಗಿದ್ದುವು, ಅವರ ಬುದ್ಧಿ ಯಾವ ಯಾವ ವಿಷಯಗಳನ್ನು ಚರ್ಚೆಮಾಡುತ್ತಿತ್ತು - ಎಂಬುದು ತಿಳಿದುಬರುತ್ತದೆ. ಅಲ್ಲಿಂದ ಈಚಿನ ಕಾವ್ಯಗಳಲ್ಲಿ ಈ ವಿಚಾರಗಳು ಅಷ್ಟಾಗಿ ಕಂಡುಬರುವುದಿಲ್ಲ. ಕಾಳಿದಾಸನಲ್ಲಿ ಅಲ್ಪಸ್ವಲ್ಪ ಕಾಣಬಹುದು. ಅಲ್ಲಿಂದ ಮುಂದೆ ಆಯಾ ಕಾಲದ ಜನಜೀವನವು ಕಾವ್ಯಗಳಲ್ಲಿ ಅಷ್ಟು ಪ್ರಧಾನವಾಗಿ ಗೋಚರವಾಗುವುದಿಲ್ಲ. ಅವು ಹೇಳುವು ದೆಲ್ಲಾ



Latest Sarkari Jobs, Govt Exam Results, Vacancies and updates on one click
Know More

ಹಿಂದಿನ ಕಥೆ - ರಾಮಾಯಣ ಭಾರತಗಳ ಕಥೆಗಳು. ಇವುಗಳನ್ನು ಚಮತ್ಕಾರದ ರೀತಿಯಲ್ಲಿ, ಸ್ವಲ್ಪ ಹರ್ಷವಾಗುವ ಹಾಗೆ, ಚಿತ್ರವಿಚಿತ್ರವಾಗಿ ವರ್ಣಿಸಿ-ದ್ದಾರೆ. ಆದರೆ ಈ ಈಚಿನ ಕವಿಗಳು ಮಾನವ-ಜೀವನದ ಮೂಲ ಪ್ರಸಂಗಗಳಿಗೆ ಕೈ ಹಾಕಿಲ್ಲ. ಅವರ ಕಾವ್ಯಗಳ ರಸಪ್ರವಾಹವು ನಮ್ಮನ್ನೋಲಾಡಿಸುವ-ಷ್ಟರದಲ್ಲ ; ಅವುಗಳ ಭಾವವು ನಮ್ಮನ್ನಾವರಿಸಿಕೊಳ್ಳುವಷ್ಟು ವಿಶಾಲವಾಗಿಲ್ಲ.

**31.** ಈ ಲೇಖಕರ ಪ್ರಕಾರ ಸಾಹಿತ್ಯದ ಉದ್ದೇಶ :

(A) ಉಲ್ಲಾಸ ಮತ್ತು ಹರ್ಷವನ್ನುಂಟು ಮಾಡುವುದು.

(B) ಸಂತೋಷದೊಂದಿಗೆ ಆತ್ಮಶೋಧನೆಯನ್ನೂ ಬೆಳೆಸುವುದು.

(C) ಸಾಮಾಜಿಕ ಪರಿವರ್ತನೆ

(D) ರಸಾನುಭವ

**32.** ಈ ಚಿನ ಕಾವ್ಯಗಳಲ್ಲಿ ಏನು ಪ್ರಧಾನವಾಗಿರಬೇಕೆನ್ನುವುದು ಕವಿಯ ಅಪೇಕ್ಷೆ ?

(A) ಚಿತ್ರ ವಿಚಿತ್ರವಾದ ಮಾನವ ಜೀವನ ಪ್ರಸಂಗಗಳು

(B) ವಿಲಾಸಪರವಾದ ಸೌಂದರ್ಯೋತ್ತೇಜಕ ಶಕ್ತಿ

(C) ಧರ್ಮಸಂಕಟ, ಆಧ್ಯಾತ್ಮಿಕ ಸಂದೇಹ, ಸಾಮಾಜಿಕ ವ್ಯಥೆ

(D) ವಿನೋದ ಪರವಾದ ಜೀವನಕಥೆ-ಯನ್ನು ಹೇಳುವುದು

**33.** ಹಳೆಯ ಕಾವ್ಯಗಳಲ್ಲಿ ವ್ಯಕ್ತವಾಗುವ ಭಾವ :

(A) ವೇದ ಪುರಾಣಗಳ ಮಹತ್ವ

(B) ಬದುಕಿನ ರಂಜಿತವಾದ ಪ್ರಸಂಗಗಳ ಚಿತ್ರಣ

(C) ಮಾನವ ಜೀವನದ ಮೂಲಪ್ರಸಂಗ-ಗಳು

(D) ಆಕಾಲದ ಜೀವನದೃಷ್ಟಿ ಮತ್ತು ಮನೋಭಾವ

**34.** ಲೇಖಕರ ಅಬಿಪ್ರಾಯದಲ್ಲಿ ಸಾಹಿತ್ಯವು ಉಂಟುಮಾಡುವ ಪರಿಣಾಮಗಳು :

(i) ಜೀವನಕ್ರಮ ಉತ್ತಮವಾಗುವುದು.

(ii) ಅಜ್ಞಾನವು ನಾಶವಾಗುವ ಹಾಗೆ ಮಾಡುವುದು.

(iii) ನಾಟಕೀಯ ಚಮತ್ಕಾರ ವನ್ನುಂಟು-ಮಾಡುವುದು

(iv) ಓದುಗನಲ್ಲಿ ಹರ್ಷವನ್ನುಂಟು ಮಾಡುವುದು.

(A) (i) ಮತ್ತು (iii)

(B) (ii) ಮತ್ತು (iv)

(C) (i) ಮತ್ತು (ii)

(D) (iii) ಮತ್ತು (iv)



Latest Sarkari Jobs, Govt Exam Results, Vacancies and updates on one click
Know More

35. ಸಹೃದಯನು ಸಾಹಿತ್ಯದಿಂದ ಪಡೆಯಬಹು-ದಾದ ಅಂತಿಮ ಅನುಭವ :

(i) ಮನ: ಪರಿಪಾಕ

(ii) ಆತ್ಮ ಶೋಧನೆ

(iii) ವಿನೋದ ಮತ್ತು ಸಂತೋಷ

(iv) ರಸಪ್ರವಾಹದಲ್ಲಿ ಓಲಾಡುವುದು

(A) (i) ಮತ್ತು (ii)

(B) (ii) ಮತ್ತು (iv)

(C) (i) ಮತ್ತು (iii)

(D) (i) ಮತ್ತು (iv)

**ಹೇಳಿಕೆ – ವಿವರಣೆ ಆಧಾರಿತ ಬಹುಆಯ್ಕೆಯ ಮಾದರಿ**

36. **ಹೇಳಿಕೆ** : ಕುಲಂ ಕುಲಮಲ್ತು ; ಚಲಂ ಕುಲಂ, ಗುಣಂ ಕುಲಂ :

**ವಿವರಣೆ** : ಕುಲವೆನ್ನುವುದು ಕುಲವಲ್ಲ ; ಕುಲಕ್ಕೆ ಛಲವಿರಬೇಕು, ಕುಲಕ್ಕೆಗುಣವಿರಬೇಕು.

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

37. **ಹೇಳಿಕೆ** : ತನುವಿನೊಳಗೆ ಹುಸಿತುಂಬಿ ; ಮನದೊಳಗೆ ವಿಷಮ ತುಂಬಿ ಮನೆಯೊಳಗೆ ಮನೆಯೊಡೆ-ಯನಿಲ್ಲ.

**ವಿವರಣೆ** : ದೇಹದಲ್ಲಿ ಸುಳ್ಳೇತುಂಬಿದ್ದು, ಮನಸ್ಸಿನಲ್ಲಿ ವಿಕ್ಷಮಾಕಾಂಕ್ಷೆಗಳೇ ಇದ್ದರೆ ದೇಹವೆನ್ನುವ ಮನೆಯಲ್ಲಿ ಅದರ ಒಡೆಯನು ಇರಲುಸಾಧ್ಯ-ವಿಲ್ಲ.

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

38. **ಹೇಳಿಕೆ** : ಅಪಾರವಾದ ಕಾವ್ಯ ಸಂಸಾರದಲ್ಲಿ, ಕವಿಯೇ ಪ್ರಜಾಪತಿ.

**ವಿವರಣೆ** : ಕಾವ್ಯವೆನ್ನುವುದು ಒಂದು ಗೋಜಲಾದಸಂಸಾರದಂತೆ ಅದರಲ್ಲಿ ಕವಿಯು ಸಮಸ್ಯೆಗೆ ಸಿಕ್ಕ ಒಡೆಯ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು ; ವಿವರಣೆ ಸರಿ



Latest Sarkari Jobs, Govt Exam Results, Vacancies and updates on one click
Know More

**39.** **ಹೇಳಿಕೆ** : 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು'

**ವಿವರಣೆ** : ಸಿಹಿಯಾದ ಕಡುಬು ತಿಂದ ಮೇಲೆ ನೀರು ಗಂಟಲಲ್ಲಿ ಇಳಿಯಲಾರದು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

**40.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(A) ಬಿ. ಪುಟ್ಟಸ್ವಾಮಯ್ಯ - ಕ್ರಾಂತಿಕಲ್ಯಾಣ

(B) ಭೈರಪ್ಪ. ಎಸ್. ಎಲ್. - ಅವಧೇಶ್ವರಿ

(C) ಅನಂತಮೂರ್ತಿ ಯು.ಆರ್. - ಮೂರುದಾರಿಗಳು

(D) ಅನಕೃ – ಮಹಾಕ್ಷತ್ರಿಯ

**41.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದ ?

(A) ಶಾಂತಿನಾಥ - ಶಾಂತಿಪುರಾಣ

(B) ರಾಘವೇಂಕ – ವಿದೇಶ ಚರಿತೆ

(C) ಜನ್ನ – ನೇಮಿನಾಥ ಪುರಾಣ

(D) ಚಾಮರಸ - ಸೋಮನಾಥ ಚರಿತೆ

**42.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದುವುದಿಲ್ಲ

(A) ಹಣತೆ - ಪು.ತಿ.ನ.

(B) ಸೌಯೋಆಟ - ಬೇಂದ್ರೆ

(C) ನವರಾತ್ರಿ - ಮಾಸ್ತಿ

(D) ಶ್ರೀರಾಮ ಪಿಟ್ಟಾಭಿಷೇಕ - ಎಸ್.ವಿ. ಪರಮೇಶ್ವರ ಭಟ್ಟ

**43.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಹ್ಹೆರೇಸ್ – ವಸ್ತು ಪ್ರತಿರೂಪ

(B) ಅರಿಸ್ಟಾಟಲ್ – ಆನ್ ಇಮ್ಯಾಜಿನೇಶನ್

(C) ರೆಲ್ಲಿ – ಇನ್ ಡಿಫೆನ್ಸ್ ಆಫ್ ಪೊಯೆಟ್ರಿ

(D) ಐ.ಎ. ರಿಚರ್ಡ್ಸ್ – ಪ್ರಾಬ್ಲಮ್ ಆಫ್ ಸ್ಟೈಲ್

**44.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ.

(A) ಹುಟ್ಟಿದಹಳ್ಳಿ - ಹಳ್ಳಿಯಹಾಡು - ಅರ್ಚಕ ರಂಗಸ್ವಾಮಿ

(B) ಗರತಿಯ ಹಾಡು - ಸಂಬೆಹೊನ್ನಮ್ಮ

(C) ಕನ್ನಡ ಜನಪದಗೀತೆಗಳು - ಜೀ.ಶಂ.ಪ

(D) ಆನ್ವಯಿಕ ಜಾನತದ - ಜೀ. ಜವರೇಗಡ

**45.** **ಬಹುಆಯ್ಕೆಯ ಜೋಡಣೆ :**

| | |
|---|---|
| (a) ವೀಣಾ ಶಾಂತೇಶ್ವರ | (i) ಹರಿವನೀರಿದು |
| (b) ಆಲನಹಳ್ಳಿ ಕೃಷ್ಣ | (ii) ಬೇಟೆ |
| (c) ಗಂಗಾಧರ ಚಿತ್ತಾಲ | (iii) ಕಾಡು |
| (d) ಕುಂ ವೀರಭದ್ರಪ್ಪ | (iv) ಗಂಡಸರು |
| | (v) ಚಪ್ಪಲಗಳು |

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (i) | (iii) | (iv) | (ii) |
| (B) | (iv) | (iii) | (i) | (ii) |
| (C) | (ii) | (iii) | (iv) | (i) |
| (D) | (iii) | (ii) | (i) | (iv) |



Latest Sarkari Jobs, Govt Exam Results, Vacancies and updates on one click
Know More

**46. ಬಹುಆಯ್ಕೆಯ ಜೋಡಣೆ**

(a) ಶೂನ್ಯಸಂಪಾದನ (i) ಆಂಡಯ್ಯ

(b) ಕಬ್ಬಿಗರ ಕಾವ (ii) ಸಿಂಗರಾರ್ಯ

(c) ರಾಜಾವಳಿಕಥೆ (iii) ಹಲಗೆಮಾರ್ಯ

(d) ಮಿತ್ರವಿಂದಾ-ಗೋವಿಂದ (iv) ನಮಸೇನ

(v) ದೇವಚಂದ್ರ

ಇವುಗಳಿಗೆ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (v) | (i) | (ii) | (iii) |
| (B) | (ii) | (iii) | (v) | (i) |
| (C) | (i) | (ii) | (iv) | (iii) |
| (D) | (iii) | (i) | (v) | (ii) |

**47. ಬಹುಆಯ್ಕೆಯ ಜೋಡಣೆ**

(a) ರುದ್ರನಾಟಕ (i) ನವರಾತ್ರಿ

(b) ಚಾರಿತ್ರಿಕ ಕಾದಂಬರಿ (ii) ಗೊಲ್ಗೊಥಾ ಮತ್ತು ವೈಶಾಖಿ

(c) ಖಂಡಕಾವ್ಯ (iii) ದುರ್ಗಾಸ್ತಮಾನ

(d) ಕಥನ ಕಾವ್ಯ (iv) ಇಂದಿರಾಬಾಯಿ

(v) ಅಶ್ವತ್ಥಾಮನ್

ಇವುಗಳಿಗೆ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (i) | (ii) | (iv) | (iii) |
| (B) | (iv) | (iii) | (ii) | (i) |
| (C) | (v) | (iii) | (ii) | (i) |
| (D) | (iv) | (i) | (v) | (iii) |

**ಅನುಕ್ರಮ ಮಾದರಿ** : ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ.

**48.** (A) ಕುಮಾರವ್ಯಾಸ, ನಂಜುಂಡಕವಿ ಲಕ್ಷ್ಮೀಶ ; ಷಡಕ್ಷರದೇವ

(B) ನಂಜುಂಡಕವಿ, ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರದೇವ

(C) ಲಕ್ಷ್ಮೀಶ, ಕುಮಾರವ್ಯಾಸ, ಷಡಕ್ಷರದೇವ, ನಂಜುಂಡಕವಿ

(D) ಷಡಕ್ಷರದೇವ, ಕುಮಾರವ್ಯಾಸ, ಲಕ್ಷೇಶ, ನಂಜುಂಡಕವಿ

**49.** (A) ಮಹಾಬ್ರಾಹ್ಮಣ, ಕನ್ನಡಿಗರ ಕರ್ಮಕಥೆ, ಚಿರಸ್ಮರಣೆ, ದುರ್ಗೇಶನಂದಿನಿ

(B) ಕನ್ನಡಿಗರ ಕರ್ಮಕಥೆ, ಮಹಾಬ್ರಾಹ್ಮಣ, ದುರ್ಗೇಶನಂದಿನಿ, ಚಿರಸ್ಮರಣೆ

(C) ಚಿರಸ್ಮರಣೆ, ಕನ್ನಡಿಗರ ಕರ್ಮಕಥೆ, ಮಹಾಬ್ರಾಹ್ಮಣ, ದುರ್ಗೇಶನಂದಿನಿ,

(D) ದುರ್ಗೇಶನಂದಿನಿ, ಕನ್ನಡಿಗರ ಕರ್ಮಕಥೆ, ಮಹಾಬ್ರಾಹ್ಮಣ, ಚಿರಸ್ಮರಣೆ.

**50.** (A) ಗಿಳಿವಿಂಡು, ಇಂಗ್ಲೀಷ್ ಗೀತಗಳು, ಮಲೆದೇಗುಲ, ಹೇಳತೇನಕೇಳ

(B) ಇಂಗ್ಲೀಷ್ ಗೀತಗಳು, ಗಿಳಿವಿಂಡು, ಹೇಳತೇನಕೇಳ, ಮಲೆದೇಗುಲ

(C) ಮಲೆದೇಗುಲ, ಗೀತಗಳು, ಇಂಗ್ಲೀಷ್ ಗೀತಗಳು, ಹೇಳತೇನಕೇಳ

(D) ಹೇಳತೇನಕೇಳ, ಗೀತಗಳು, ಮಲೆದೇಗುಲ, ಇಂಗ್ಲೀಷ್ ಗೀತಗಳು



Latest Sarkari Jobs, Govt Exam Results, Vacancies and updates on one click
Know More

prepp

# Latest Sarkari jobs, Govt Exam alerts, Results and Vacancies

- Latest News and Notification
- Exam Paper Analysis
- Topic-wise weightage
- Previous Year Papers with Answer Key
- Preparation Strategy & Subject-wise Books

To know more **Click Here**

www.prepp.in